ನಡೆಯುತ್ತಾ ಹಿಂತಿರುಗಿ ನೋಡಿದೆ. ಅಮ್ಮ ಚೀರಾಡುತ್ತ ಎದೆ ಹೊಡೆದುಕೊಳ್ಳುತ್ತ ಅಳುತ್ತಿದ್ದಳು. ಅಪ್ಪ ಅಯೋಮಯನಂತೆ ನಿಂತಿದ್ದ. ಅತ್ತಿಗೆ ಅಮ್ಮನನ್ನು ಒಳಗೆ ಕರೆದುಕೊಂಡು ಹೋಗುತ್ತಿದ್ದಳು. ಅಪ್ಪನನ್ನು ಅಣ್ಣ ಒಳಗೆ ಕರೆದುಕೊಂಡು ಹೋಗುತ್ತಿದ್ದ. ಸುಮ್ಮನೆ ದೇವಾಲಯದ ಕಡೆಗೆ ನಡೆದೆ. ಅಂದು ಭಿಕ್ಷುಕ ಕುಳಿತಿದ್ದ ಕಡೆಗೆ ನಾನು ಕುಳಿತೆ. ಸಂಜೆಯಾಗ ತೊಡಗಿತ್ತು. ಅಲ್ಲಿಗೆ ಬಂದು ಹೋಗುವವರು, ನನ್ನೆದುರು ನಾಣ್ಯ ಹಾಕಿ ಹೋಗತೊಡಗಿದರು. ನಾನು ಎಲ್ಲರನ್ನೂ ಗುರುತಿಸತೊಡಗಿದೆ. ಜಮೀನ್ದಾರರು, ಶಾನುಭೋಗರು, ಗೌಡರು, ಅಯ್ಯನವರು, ಅರ್ಚಕರು, ಅವರ ಕುಟುಂಬ, ನನ್ನ ಗೆಳತಿಯರು, ಅವ್ರ ಮಕ್ಕಳು, ಅವರ ಕುಟುಂಬ... ಎಲ್ಲರನ್ನೂ ನೋಡಿದೆ. ಆದರೆ ಯಾರೂ ನನ್ನನ್ನು ಗುರುತಿಸಲೇ ಇಲ್ಲ. ಅಮ್ಮನೇ ಗುರುತಿಸದ ಮೇಲೆ, ಜೊತೆಯಲ್ಲಿ ಹುಟ್ಟಿದವನಿಗೇ ಗುರುತು ಸಿಗದ ಮೇಲೆ... ನನಗೇನು ಚಿಂತೆ. ಆದರೆ ಅವಳು... ಪೊನ್ನಿ... ಅವಳೇಕೆ ಬರಲಿಲ್ಲ. ಉತ್ತರ ಸಿಗಲಿಲ್ಲ. ಬಹುಶಃ ನಾಳೆ, ನಾಡಿದ್ದು... ಯಾವಾಗಲಾದರೂ ಬರಬಹುದು. ಕಾಯೋಣ ಅಂದುಕೊಂಡೆ.

ರಾತ್ರಿ ಸುಮಾರು ಏಳು ಗಂಟೆ ಆಗತೊಡಗಿತ್ತು. ಕತ್ತಲಾಗುತ್ತಿತ್ತು. ನನಗೆ ಯಾವ ಭಯ? ವರುಷಗಟ್ಟಲೇ ತಿಳಿಯದ ಯಾವ ಯಾವುದೋ ಜಾಗದಲ್ಲಿ ಇದ್ದವಳಿಗೆ ನನ್ನ ಊರಿನಲ್ಲಿ ಭಯವೇ? ಆಗ ಬಂದರು ಆಕೆ. ವಯಸ್ಸಾಗಿತ್ತು. ಕೂದಲೆಲ್ಲ ಬೆಳ್ಳಗೆ. ನಿಧಾನವಾಗಿ ನಡೆಯುತ್ತಾ ಜೊತೆಯಲ್ಲಿ ಒಬ್ಬ ಕೆಲಸದಾಕೆಯನ್ನು ಕರೆದುಕೊಂಡು ಬರುತ್ತಿದ್ದರು. ನನ್ನ ನೃತ್ಯ ಗುರು ಆಕೆ. ಈ ವಯಸ್ಸಿನಲ್ಲಿಯೂ ಆಕೆಯ ನಡಿಗೆಯ ಬಳುಕು ಎಷ್ಟು ಚಂದ ಅನ್ನಿಸಿತು. ಅವರ ಕಾಲಿಗೆ ಬಿದ್ದೆ. ತಮ್ಮ ಕೈಚೀಲದಿಂದ ಪರ್ಸನ್ನು ತೆಗೆದು ಒಂದು ರೂಪಾಯಿಯ ನಾಣ್ಯ ತೆಗೆದು ನನ್ನ ಕೈಗೆ ಕೊಡಲು ಬಂದವರು ನನ್ನನ್ನೇ ದಿಟ್ಟಿಸಿದರು. ಅವರ ಕಣ್ಣು... ನನ್ನ ಕಣ್ಣಲ್ಲಿ... ಒಂದು ಕ್ಷಣ ಮೈಮರೆತವರಂತೆ 'ಪಳ್ನಿ ಕಣ್ಣ್.. ಇದೇ ಮಾದರಿ...' ನಿಟ್ಟುಸಿರಿಟ್ಟು 'ಇಂದಾ...' ಎಂದರು. ನಾನು ಕಂಠ ಬಿಗಿದು ಕುಸಿದೆ. 'ನಾನ್ ದಾನ್ ಪಳ್ನಿಂಗೋ ಟೀಚರ್... ನಾನ್ ದಾನ್ ಪಳ್ನಿ... (ನಾನೇ ಪಳ್ನಿ ಟೀಚರ್ ನಾನೇ ಪಳ್ನಿ)' ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದೆ. 'ಪಳ್ನಿಯಾ...' ಅಂದವರೇ ನನ್ನನ್ನು ನೋಡಿ 'ಅಯ್ಯೋ ಕಡವಳೇ...' ಎಂದು ಹೊರಗಿನಿಂದಲೇ ದೇವರಿಗೆ ನಮಸ್ಕರಿಸಿ 'ಮೊದಲು ಮನೆಗೆ ಬಾ' ಎಂದು ಮುಂದೆ ಮುಂದೆ ನಡೆದರು. ನಾನು ಹಿಂದೆ ಹಿಂದೆ. ಕತ್ತಲಾವರಿಸುತ್ತಿತ್ತು. ಯಾರೂ ಅಷ್ಟಾಗಿ ಗಮನಿಸಲಿಲ್ಲ. ಗಮನಿಸಿದರೂ ಏನೂ ಅಂದುಕೊಳ್ಳುತ್ತಿರಲಿಲ್ಲ. ಏಕೆಂದರೆ ನನ್ನ ಗುರುಗಳ ಮನಸ್ಸೇ ಹಾಗೆ. ಯಾರಾದರೂ ಇರಲಿ, ಬಡವರು, ಅನಾಥರು, ಅಸಹಾಯಕ ಹೆಣ್ಣುಮಕ್ಕಳು ಅವರನ್ನು ಮೊದಲು ತಮ್ಮ ಮನೆಗೆ ಕರೆದುಕೊಂಡು ಹೋಗಿ ಉಪಚರಿಸಿ ನಂತರ ಅವರಿಗೆ ಏನಾದರೂ ದಾರಿ ತೋರಿಸಿ ಕಳುಹಿಸುತ್ತಿದ್ದರು. ಅವರಿಗೆ ಗಂಡ, ಮಕ್ಕಳು ಅಂತ ಯಾರೂ ಇರಲಿಲ್ಲ. ತಮ್ಮ ಜೀವನವನ್ನೇ ಕಲೆಗೆಂದು ಮೀಸಲಾಗಿಟ್ಟಿದ್ದರು ಅವರು. ಅವರ ಸಾನಿಧ್ಯ ದೊರಕಿದ್ದು ನನಗೆ ಅಮ್ಮನದಕ್ಕಿಂತಾ ಹೆಚ್ಚಿನದೇ ಅನ್ನಿಸಿತು. ಅಮ್ಮ ಮಾಡುವುದನ್ನೆಲ್ಲ ಅವರೇ ಮಾಡಿದರು. ನನ್ನ ಚಿಂದಿ ಬಟ್ಟೆ ತೆಗೆದು ಎಸೆದು, ಮೈಗೆ, ತಲೆಗೆ ಎಲ್ಲ ಎಣ್ಣೆ ಹಚ್ಚಿ, ಬಿಸಿನೀರಿನಲ್ಲಿ ಎರೆದು. ಒಳ್ಳೆಯ ಸೀರೆ ಉಡಿಸಿ , ಊಟ, ಉಪಚಾರ ಎಲ್ಲವನ್ನೂ ಮಾಡಿದರು. ಕೆಲಸದಾಕೆಯ ನೆರವು ಅವರಿಗೆ ಇತ್ತಾದ್ದರಿಂದ ಆಯಾಸಪಡದಂತೆ ಮಾಡಿದರು. ಆದರೆ ಅವರೊಬ್ಬರೇ ಮಾತನಾಡುತ್ತಿದ್ದರು 'ಎನ್ನ ಆಚೀ ಪಳ್ನೀ... ಕಡವಳೇ... ಏನಮ್ಮ ನಿನ್ನ ಲೀಲೆ... ಇಷ್ಟು ವರುಷದ ಮೇಲೆ ಇವಳನ್ನು ಹೀಗೆ ನೋಡಿದೆನಲ್ಲ... ಎಲ್ಲೆಲ್ಲಿ ಹುಡುಕಿದೆವು...' ರಾತ್ರಿ ಹತ್ತು ಗಂಟೆಯ ನಂತರ ನಾನು ಅವರಿಗೆ ಕತೆ